ಈ) ಹೌದು.

ಉ) ಸಿಲೆಬಸ್, ಪರೀಕ್ಷೆ ಮತ್ತು ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಪಶುವೈದ್ಯಕೀಯ ಪರಿಷತ್ತು, ನಿಗಧಿಪಡಿಸಿರುವುದನ್ನು ಅನುಸರಿಸಿ ಹಾಗೂ ಭಾರತೀಯ ಪಶುವೈದ್ಯಕೀಯ ಪರಿಷತ್ತಿನ ಪರತ್ತಿನಂತೆ ಅಗತ್ಯವಾದ ಕಾನೂನಿನ ಕ್ರಮ ವಿಧಾನಗಳನ್ನು ಅನುಸರಿಸಿದ ನಂತರ 1994-95ನೇ ಸಾಲಿನಿಂದ ಬಿ.ವಿ.ಎಸ್ಸಿ ಮತ್ತು ಪಶುಸಂಗೋಪನೆ ಪದವಿಯನ್ನು ನೀಡಲಾಗುತ್ತಿದೆ. ಆದರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಾಧ್ಯವಾಗಿರುವುದಿಲ್ಲ. ಅದಾಗ್ಯೂ ಈ ಮೊದಲಿಗೆ ಲಭ್ಯವಿರುವ ಸೌಕರ್ಯಗಳನ್ನು ಉಪಯೋಗಿಸಿಕೊಂಡು ಸಂಶೋಧನಾ ಚಟುವಟಿಕೆಗಳನ್ನು ತೃಪ್ತಿಕರವಾಗಿ ಕೈಗೊಳ್ಳಲಾಗುತ್ತಿದೆ. ಈ ಪ್ರಯತ್ನದಲ್ಲಿ ಕಾರ್ಯದರ್ಶಿ ಸಂಶೋಧನಾ ಉದ್ದೇಶಕ್ಕಾಗಿ ನೇಮಕಗೊಂಡ ಸಿಬ್ಬಂದಿಯು ಈ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ.

ಶಿವಮೊಗ್ಗದ ಮಲವಗೊಪ್ಪದಲ್ಲಿರುವ ತುಂಗಭದ್ರಾ ಸಕ್ಕರೆ ಕಾರ್ಖಾನೆ ಪರಿಸ್ಥಿತಿ.

1245(1187) ಶ್ರೀ ಕರಿಯಣ್ಣ (ಹೊಳೆಹೊನ್ನೂರು) :— ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಶಿವಮೊಗ್ಗದ ಮಲವಗೊಪ್ಪದಲ್ಲಿರುವ ತುಂಗಭದ್ರಾ ಸಕ್ಕರೆ ಕಾರ್ಖಾನೆ ಯಾವ ಸ್ಥಿತಿಯಲ್ಲಿ ಇದೆ?

2) ಈ ವಿಭಾಗದ ರೈತರ ಹಿತದೃಷ್ಟಿಯಿಂದ ಇದನ್ನು ತೆರೆಯಲು ಬಯಸುವಿರಾ?

3) ಒಂದು ಪಕ್ಷ ಈ ಕಾರ್ಖಾನೆಯನ್ನು ಪ್ರಾರಂಭ ಮಾಡಲು ಬಾರದೆ ಇದ್ದರೆ ಈ ಭಾಗದ ರೈತರ ಕಬ್ಬನ್ನು ಅರೆಯಲು ಯಾವ ಉಪಾಯವನ್ನು ಸರ್ಕಾರ ಸೂಚಿಸುತ್ತದೆ?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :—

1) ಮೆ: ತುಂಗಭದ್ರ ಸಕ್ಕರೆ ಕಾರ್ಖಾನೆಯಿಂದ ಬರಬೇಕಾದ ಬಾಕಿಗಾಗಿ ಚಿನ್ನೆ ಮೂಲದವರು ಚೆನ್ನೈ ಉಚ್ಚ ನ್ಯಾಯಾಲಯದಲ್ಲಿ ತಕರಾರು ಹೂಡಿದ್ದರಿಂದ ನ್ಯಾಯಾಲಯವು ಈ ಕಾರ್ಖಾನೆಯನ್ನು ಸಮಾಪನೆಗೊಳಿಸಲು ಮತ್ತು ಅದರ ಸಮಸ್ತ ವ್ಯವಹಾರವನ್ನು ನ್ಯಾಯಾಲಯದಿಂದ ನೇಮಕಗೊಂಡ ಸಮಾಪನಾಧಿಕಾರಿಗಳ ವಶಕ್ಕೆ ನೀಡಲು ಆದೇಶಿಸಿರುತ್ತೆ. ಸಮಾಪನಾಧಿಕಾರಿಗಳು ಕಾರ್ಖಾನೆಯ ಸಮಸ್ತ ವ್ಯವಹಾರವನ್ನು ತಮ್ಮ ವಶಕ್ಕೆ ಪಡೆದಿರುವ ಬಗ್ಗೆ ಮಾಹಿತಿ ಹಾಜರಪಡಿಸಿರುತ್ತಾರೆ.

2) ಈ ಕಾರ್ಖಾನೆಯು ಖಾಸಗಿ ಕ್ಷೇತ್ರದ ಕಾರ್ಖಾನೆಯಾಗಿದ್ದು, ಸದರಿ ಕಾರ್ಖಾನೆಯನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂದು ಈ ಹಿಂದೆ ಯೋಚಿಸಿದ್ದ

ಪ್ರಸ್ತಾವನೆಯನ್ನು ಮೇಲಿನ ಕಾರಣಕ್ಕಾಗಿ ಕೈಬಿಟ್ಟಿರುವುದರಿಂದ ಸದರಿ ಕಾರ್ಖಾನೆ ಮತ್ತೆ ಸರ್ಕಾರದ ಮತಿಯಿಂದ ತೆರೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

3) ಪ್ರಸ್ತುತ ಈ ಹಿನ್ನೆಲೆಯಲ್ಲಿ ಹೊಸದಾಗಿ 2 ಖಾಸಗಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಎರಡು ಸಂಸ್ಥೆಗಳು ಮುಂದೆ ಬಂದು ಕೇಂದ್ರ ಸರ್ಕಾರದಿಂದ ಪರವಾನಿಗೆ ಪಡೆದಿರುತ್ತದೆ. ಅದನ್ನು ಹೊರತುಪಡಿಸಿ ಬೇರೆ ಯಾವುದೇ ಹೊಸ ಕಾರ್ಖಾನೆ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಆದರೆ ಈ ಪ್ರದೇಶದಲ್ಲಿನ ರೈತರು ಬೆಳೆಯಂತಹ ಕಬ್ಬನ್ನು ನೆರೆ ಹೊರೆಯ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜು ಮಾಡಲಾಗುತ್ತಿದೆ. ಪರವಾನಿಗೆ ಪಡೆದ ಸಂಸ್ಥೆಯವರು ಸಕ್ಕರೆ ಕಾರ್ಖಾನೆಸ್ಥಾಪಿಸಲು ಮುಂದೆ ಬಂದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಅರ್ಹತೆಯ ಮೇಲೆ ಪರಿಶೀಲಿಸಲಾಗುವುದು.

1246(1188) ಶ್ರೀ ಕರಿಯಣ್ಣ (ಹೊಳೆಹೊನ್ನೂರು) :—ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕು ಮತ್ತು ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನಲ್ಲಿ ಕಟ್ಟಡಗಳು ಇಲ್ಲದ ಪಶುಗಳ ಆಸ್ಪತ್ರೆಗಳು ಎಷ್ಟು?

ಆ) ಈ ಆಸ್ಪತ್ರೆಗಳಿಗೆ ಕಟ್ಟಡ ಕಟ್ಟಲು ಯಾವ ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) ಯಾವುದು ಇಲ್ಲಾ.

ಆ) ಉದ್ಭವಿಸುವುದಿಲ್ಲ.

ಶಿವಮೊಗ್ಗ ಜಿಲ್ಲೆ ಹಾಗೂ ದಾವಣಗೆರೆ ಜಿಲ್ಲೆಯಲ್ಲಿ ಜಾನುವಾರುಗಳಿಗೆ ಔಷಧಿಗಳ ವಿತರಣೆಯ ಹಣ.

1247(1189) ಶ್ರೀ ಕರಿಯಣ್ಣ (ಹೊಳೆಹೊನ್ನೂರು) :— ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಶಿವಮೊಗ್ಗ ಜಿಲ್ಲೆ ಮತ್ತು ದಾವಣಗೆರೆ ಜಿಲ್ಲೆಯಲ್ಲಿರುವ ಜಾನುವಾರುಗಳ ಸಂಖ್ಯೆ ಎಷ್ಟು? ಇದಕ್ಕೆ ಆಸ್ಪತ್ರೆಗಳು (ಪಶುವೈದ್ಯ ಮತ್ತು ಪ್ರಾಥಮಿಕ ಪಶು ಆಸ್ಪತ್ರೆ) ಎಷ್ಟು ಇವೆ ಎಂಬುದನ್ನು ಜಿಲ್ಲಾವಾರು ವಿವರ ನೀಡುವುದು.

2) ಈ ಆಸ್ಪತ್ರೆಗಳಿಗೆ ವರ್ಷಕ್ಕೊಂದು ಬಾರಿ ನೀಡುವ ಹಣದ ಮೊತ್ತವೆಷ್ಟು?